೭. ಗೌರೀ ಆರುತಿಯ ಪದಗಳು

"ಆರುತಿಬೆಳಗಿರೆ ಮೂರಮಣಗೆ ವರನಾರಿಯರು" ಎಂಬಂತೆ

ಆರುತಿ ಬೆಳಗಿರೆ ನಾರಿಯರು ಬೇಗ ।
ಆದಿ ಕೊಲ್ಹಾಪುರದ ಮಹಾಲಕ್ಷ್ಮೀಗೆ ॥
ಹಾಡುತ ಜಾಣೆಯರೆಲ್ಲರು ।
ಆದಿ ನಾರಾಯಣ ಪ್ರೀಯಳಿಗೆ ॥ಪ॥

ಪಿಲ್ಲೆ ಕಾಲುಂಗುರ ಲುಲ್ಲು ಪೈಜನರುಳಿ ।
ಗಿಲ್ಲು ಗಿಲ್ಲೆಂದು ಹೆಜ್ಜೆಯಸಿಡುತ ॥
ಉಲ್ಲಾಸದಿಂದಲಿ ನಡುವಿಗೊಡ್ಯಾಣ ।
ಪುಲ್ಲನಾಭನ ಪ್ರೀಯಳಿಗೆ ॥೧॥

ಜರದ ಪೀತಾಂಬರ ಸಿರಿಗೆಗಳಲಿಯುತ ।
ಝಗಝಗಿಯಿಂದ ಹೊಳೆಯುತಲಿ ॥
ತೊಟ್ಟ ಕಂಚುಕವನು ಇಟ್ಟ ವಂಕಿಯ ತೋಡೆ ।
ಬೆಟ್ಟದ ವೇಂಕೋಬನ ಮಡದಿಗೆ ॥೨॥

ಚೌರಿರಾಗುಟಿ ಗೊಂಡೆ ಹೆರಳು ಬಂಗಾರ ।
ಬುಗುಡಿ ವಾಲಿಗಳು ಹೊಳೆಯುತಲಿ ॥
ಸಡಗರದಿಂದ ಕುಡಿಯ ಕುಂಕುಮ ಹಚ್ಚಿ ।
ಒಡೆಯ ವೇಂಕೋಬನ ಮಡದಿಗೆ ॥೩॥